# ಶರ್ಮಿಳಾ: ದಾರಿ ಯಾವುದು?

ಇದನ್ನು ದುರಂತ ಎನ್ನಬೇಕೋ ಅಥವಾ ವ್ಯಂಗ್ಯ ಅನ್ನಬೇಕೋ... ಗೊತ್ತಾಗುತ್ತಿಲ್ಲ. ತನ್ನ ರಾಜ್ಯದ ಜನರ ಹಿತರಕ್ಷಣೆಗಾಗಿ ಕಳೆದ 16 ವರ್ಷಗಳಿಂದ ಉಪವಾಸ ವ್ರತ ನಡೆಸುತ್ತಾ, ಪೊಲೀಸ್ ಬಂಧನದಲ್ಲೇ ಜೀವ ಸವೆಸುತ್ತಿದ್ದ ಹೆಣ್ಣು ಮಗಳೊಬ್ಬಳು ಈಗ ಇಡೀ ರಾಜ್ಯಕ್ಕೇ ಬೇಡವಾಗಿ ವಾಸಿಸಲೂ ನೆಲೆಯಿಲ್ಲದೆ ಅತಂತ್ರಳಾಗಿದ್ದಾಳೆ. ಅದಕ್ಕೆ ಕಾರಣ– ಆಕೆ ಉಪವಾಸ ಸತ್ಯಾಗ್ರಹ ನಿಲ್ಲಿಸಿದ್ದು! 'ಉಕ್ಕಿನ ಮಹಿಳೆ' ಎಂದು ಇಷ್ಟು ವರ್ಷಗಳ ಕಾಲ ಆಕೆಯನ್ನು ಕೊಂಡಾಡಿ, ತಲೆಯ ಮೇಲೆ ಮೆರೆಸಿದ ಮಣಿಪುರ ರಾಜ್ಯದ ಜನರೇ ಈಗ ಆಕೆಗೆ 'ನಮ್ಮ ನಡುವೆ ಬದುಕಬೇಡ' ಎನ್ನುತ್ತಿದ್ದಾರೆ! ಆಕೆ ಇರೋಮ್ ಶರ್ಮಿಳಾ.

ಮಣಿಪುರದಲ್ಲಿ ಸಶಸ್ತ್ರ ಪಡೆಗಳ ವಿಶೇಷ ಕಾಯ್ದೆ (ಅಫ್‌ಸ್ಪಾ)ಯನ್ನು ತೆಗೆದುಹಾಕಬೇಕೆಂದು ಅಲ್ಲಿನ ಜನರ ಹೋರಾಟ ಎರಡು ದಶಕಗಳಿಂದಲೂ ನಡೆಯುತ್ತಿದೆ. ಪ್ರತ್ಯೇಕತಾವಾದಿ ಬಂಡುಕೋರರನ್ನು ಮಟ್ಟ ಹಾಕಲು ಸಶಸ್ತ್ರ ಪಡೆಗೆ ವಿಶೇಷ ಅಧಿಕಾರ ಇರಲೇಬೇಕು ಎನ್ನುವುದು ಸರ್ಕಾರದ ವಾದ. ಆದರೆ ಈ ಕಾಯ್ದೆಯ ವ್ಯಾಪಕ ದುರುಪಯೋಗ ಆಗುತ್ತಿದ್ದು ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ. ಈ ಕಾಯ್ದೆಯನ್ನು ರದ್ದುಗೊಳಿಸಬೇಕೆಂದು ಒತ್ತಡ ಹೇರಿದಾಕೆ ಇರೋಮ್ ಶರ್ಮಿಳಾ. ಅದಕ್ಕಾಗಿ ಕಳೆದ 16 ವರ್ಷಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಆಕೆಯನ್ನು ಆಸ್ಪತ್ರೆಯಲ್ಲಿ ಬಂಧನದಲ್ಲಿಟ್ಟು ಬಲವಂತವಾಗಿ ಮೂಗಿನಿಂದ ದ್ರವಾಹಾರ ನೀಡಲಾಗುತ್ತಿತ್ತು. ಪ್ರತಿ ತಿಂಗಳೂ ಕೋರ್ಟಿಗೆ ಹಾಜರು ಪಡಿಸಲಾಗುತ್ತಿತ್ತು. ಅಲ್ಲಿ ನ್ಯಾಯಾಧೀಶರು ಕೇಳುತ್ತಿದ್ದುದು ಒಂದೇ ಪ್ರಶ್ನೆ– ಉಪವಾಸ ತೊರೆಯುತ್ತೀರಾ? ಈಕೆ 'ಇಲ್ಲ' ಎನ್ನುವುದು. ಪೊಲೀಸರು ಮರಳಿ ಆಸ್ಪತ್ರೆಗೆ ಕರೆತಂದು ಕಾವಲು ಕಾಯುವುದು. ಇದು ಕಳೆದ 16 ವರ್ಷಗಳಿಂದಲೂ ತಪ್ಪದೇ ನಡೆಯುತ್ತಿತ್ತು!

ಕಳೆದ ವಾರ ಶರ್ಮಿಳಾ 'ಉಪವಾಸ ತೊರೆಯುತ್ತೇನೆ' ಎಂದು ಘೋಷಿಸಿದ್ದು ದೊಡ್ಡ ಸುದ್ದಿ. 'ಉಪವಾಸ ಸತ್ಯಾಗ್ರಹಕ್ಕೆ ಸರ್ಕಾರ ಬಗ್ಗುವಂತೆ ಕಾಣುತ್ತಿಲ್ಲ. ಹಾಗಾಗಿ ನಾನೇ ರಾಜಕೀಯಕ್ಕೆ ಇಳಿದು ಸಶಸ್ತ್ರ ಪಡೆಗಳ ವಿಶೇಷ ಕಾಯ್ದೆ ರದ್ದುಪಡಿಸಲು ಹೋರಾಡುತ್ತೇನೆ. ಅದಕ್ಕಾಗಿ ರಾಜ್ಯದ ಮುಖ್ಯಮಂತ್ರಿಯಾಗುತ್ತೇನೆ' ಎಂದಿದ್ದಾಳೆ ಶರ್ಮಿಳಾ. ಹಾಗೆ ನುಡಿದ ಆಕೆ ಜೇನುತುಪ್ಪ ಸೇವಿಸಿ ಉಪವಾಸ ಕೊನೆಗೊಳಿಸಿದ್ದೂ ಆಯಿತು.



ಆದರೆ ಇಷ್ಟು ವರ್ಷಗಳ ಕಾಲ ಆಕೆಯನ್ನು ಬೆಂಬಲಿಸಿದ ಸಾವಿರಾರು ಜನ ಈಗ ಆಕೆಯ ಬಗ್ಗೆ ಭ್ರಮನಿರಸನಗೊಂಡಿದ್ದಾರೆ. 'ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ ರದ್ದಾಗದೆ ಉಪವಾಸ ನಿಲ್ಲಿಸುವುದಿಲ್ಲ ಎನ್ನುವ ಮಾತು ತಪ್ಪಿರುವ ಶರ್ಮಿಳಾ ನಮಗೆ ಬೇಡ. ಆಕೆ ನಮ್ಮ ನಡುವೆ ವಾಸಿಸುವುದೂ ಬೇಡ. ಆಕೆಯ ನಿರ್ಧಾರದಿಂದ ನಮ್ಮ ಹೋರಾಟಕ್ಕೆ ಹೊಡೆತ ಬಿದ್ದಿದೆ' ಎಂದು ಆಕ್ರೋಶಗೊಂಡಿದ್ದಾರೆ. ಸ್ವಯಂಸೇವಾ ಸಂಸ್ಥೆಯೊಂದು ತನಗೆ ನೀಡಿದ ಮನೆಗೆ ಆಕೆ ಮರಳಿದಾಗ, ಸುತ್ತಲಿನ ಮನೆಗಳವರು ಆಕೆ ಅಲ್ಲಿ ವಾಸಿಸದಂತೆ ತಡೆದಿದ್ದಾರೆ. ಇಸ್ಕಾನ್ ಸಂಸ್ಥೆಯವರು ಆಶ್ರಯ ನೀಡಲು ಯತ್ನಿಸಿದಾಗ ಅದಕ್ಕೂ ತಡೆಯೊಡ್ಡಿದ್ದಾರೆ. ಆಕೆಯ ಹೋರಾಟವನ್ನು ಬೆಂಬಲಿಸಲೆಂದೇ 2008ರಲ್ಲಿ ಹುಟ್ಟಿಕೊಂಡಿದ್ದ ಶರ್ಮಿಳಾ ಕನ್‌ಬ ಲುಪ್ (ಸಕಾಲ್) ಸಂಘಟನೆ ತನ್ನನ್ನು ತಾನೇ ಬರ್ಖಾಸ್ತುಗೊಳಿಸಿದೆ. ಇರಲು ಮನೆಯಿಲ್ಲದ ಆಕೆಯ ಮೇಲೆ ಕರುಣೆ ತೋರಿ ಸ್ಥಳೀಯ ರೆಡ್‌ಕ್ರಾಸ್ ಸಂಘಟನೆ ಈಗ ತಾತ್ಕಾಲಿಕ ಆಶ್ರಯ ನೀಡಿದೆ.

ಜನರ ಈ ಸಿಟ್ಟಿಗೆ ಕಾರಣವೇನಿರಬಹುದು? ಒಂದು ಮೂಲದ ಪ್ರಕಾರ, ಶರ್ಮಿಳಾರಿಗೆ ಆಶ್ರಯ ಕೊಟ್ಟರೆ ಬಂಡುಕೋರರು ತಮ್ಮ ಮೇಲೆ ದಾಳಿ ಮಾಡಬಹುದು ಎಂಬ ಭಯ. ಇನ್ನೊಂದು ಮೂಲದ ಪ್ರಕಾರ, 'ಉಪವಾಸ ತೊರೆದು ತನ್ನ ಆತ್ಮೀಯ ಗೆಳೆಯ ಎಡ್ಮಂಡ್ ಕುಟಿನ್ಹೋ ನನ್ನು ಮದುವೆಯಾಗಲು ಕೈಗೊಂಡಿರುವ ಆಕೆಯ ನಿರ್ಧಾರ.' 'ಡೆಸ್ಮಂಡ್ ಕುಟಿನ್ಹೊ ಭಾರತೀಯ ಸಂಜಾತ ಇಂಗ್ಲೆಂಡ್ ಪ್ರಜೆ. ಆತನನ್ನು ಪ್ರೇಮಿಸಿರುವ ಶರ್ಮಿಳಾ ಹೋರಾಟಕ್ಕೆ ನ್ಯಾಯ ಸಲ್ಲಿಸಲು ಆಗದು. ಬೇಕಿದ್ದರೆ ಮದುವೆಯಾಗಿ ಆಕೆ ನೆಮ್ಮದಿಯಿಂದಿರಲಿ. ಆದರೆ ಹೋರಾಟಕ್ಕೆ ಇಳಿದು ನಮ್ಮನ್ನು ದಾರಿ ತಪ್ಪಿಸುವುದು ಬೇಡ' ಎಂದೂ ಜನ ವಿರೋಧ ವ್ಯಕ್ತಪಡಿಸಿದ್ದಾರೆ.

44ರ ಹರೆಯದ ಇರೋಮ್ ಶರ್ಮಿಳಾ ಸದ್ಯಕ್ಕಂತೂ ಏಕಾಂಗಿ. ಇಂಫಾಲ್ ಮೂಲದ ಹ್ಯೂಮನ್ ರೈಟ್ಸ್ ಅಲರ್ಟ್ (ಎಚ್‌ಆರ್‌ಎ) ಮಾತ್ರ ಆಕೆಯ ಬೆಂಬಲಕ್ಕೆ ನಿಂತಿದೆ. 'ಈಗ ಆಕೆಯ ಆರೋಗ್ಯ ಮತ್ತು ರಕ್ಷಣೆಯ ಕಡೆಗೆ ಗಮನ ಕೊಡಬೇಕು. ಉಳಿದದ್ದೆಲ್ಲ ಆಮೇಲೆ' ಎನ್ನುವುದು ಎಚ್‌ಆರ್‌ಎ ವಕ್ತಾರರ ಹೇಳಿಕೆ. ಬಂಡುಕೋರರ ಬೆದರಿಕೆಯ ಹಿನ್ನೆಲೆಯಲ್ಲಿ ಆಕೆಗೆ ಪೊಲೀಸ್ ರಕ್ಷಣೆ ಮುಂದುವರಿಸಲಾಗಿದೆ.

'ಜನ ನನ್ನನ್ನು ತಪ್ಪು ತಿಳಿದುಕೊಂಡಿದ್ದಾರೆ. ನಾನು ಹೋರಾಟವನ್ನು ಕೈಬಿಟ್ಟಿಲ್ಲ. ನನ್ನ ಕಾರ್ಯತಂತ್ರವನ್ನು ಬದಲಾಯಿಸಿದ್ದೇನೆ' ಎಂದಿದ್ದಾಳೆ ಶರ್ಮಿಳಾ. 28ರ ಹರೆಯದಲ್ಲಿ ತನ್ನ ಜೀವನದ ಬಹುಮುಖ್ಯ ಅವಧಿಯನ್ನು ಹೋರಾಟಕ್ಕೆ ಅರ್ಪಿಸಿದ ಶರ್ಮಿಳಾ, ಅದಕ್ಕಾಗಿ ತನ್ನ ಪ್ರೀತಿ ಮತ್ತು ಸರ್ವಸ್ವವನ್ನೂ ಬಲಿಕೊಟ್ಟವಳು. ಎಷ್ಟು ಒತ್ತಡ ಬಂದರೂ ಆಹಾರ ಸೇವಿಸದೆ ಹೋರಾಟದ ಕಿಚ್ಚನ್ನು ಜೀವಂತವಾಗಿ ಇಟ್ಟಾಕೆ. ಈಗ ಒಂದು ನಿರ್ಧಾರದಿಂದ, ಇಷ್ಟು ವರ್ಷಗಳ ಕಾಲ ಮಾಡಿದ ಎಲ್ಲ ತ್ಯಾಗಗಳೂ ಮಣ್ಣುಗೂಡಿದಂತಾಯಿತೆ?

ಶರ್ಮಿಳಾಳನ್ನು ಸೆಳೆಯಲು ಕಾಂಗ್ರೆಸ್, ಬಿಜೆಪಿ ಸಹಿತ ಹಲವು ರಾಜಕೀಯ ಪಕ್ಷಗಳು ಸಿದ್ಧವಾಗಿವೆ. ಅದೆಲ್ಲವನ್ನು ಬಿಟ್ಟು ಪ್ರತ್ಯೇಕ ರಾಜಕೀಯ ಪಕ್ಷ ಕಟ್ಟಲು ಶರ್ಮಿಳಾಗೆ ಸಾಧ್ಯವೆ? ಒಮ್ಮೆ ಭ್ರಮನಿರಸನಗೊಂಡ ಜನ ಆಕೆಯ ರಾಜಕೀಯ ಪಕ್ಷವನ್ನು ಬೆಂಬಲಿಸಬಹುದೆ? ಶರ್ಮಿಳಾ ಇನ್ನೊಬ್ಬ ಕೇಜ್ರಿವಾಲ್ ಆಗಬಹುದೆ?

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65